ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ : ಸಿ5(1)ವರ್ಗ-21/2016-17 ದಿನಾಂಕ : 25/06/2016

**ಅಧಿಕೃತ ಜ್ಞಾಪನ**

ವಿಷಯ:- 2016-17 ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂತರ ಆಯುಕ್ತಾಲಯ ವರ್ಗಾವಣೆಗಳ ಬಗ್ಗೆ.

ಉಲ್ಲೇಖ:- ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 22 ಸೇನೌವ 2013 ದಿ:7-6-2013

2. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 22 ಸೇನೌವ 2013 ದಿ:14-6-2013
3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 18 ಸೇನೌವ 2014 ಬೆಂಗಳೂರು ದಿ:6-2-2014
4. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 17 ಸೇನೌವ 2015 ಬೆಂಗಳೂರು ದಿನಾಂಕ:27-04-2015.
5. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 63 ಸೇನೌವ 2015 ಬೆಂಗಳೂರು ದಿನಾಂಕ: 01-10-2015.
6. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 25 ಸೇನೌವ 2015 ಬೆಂಗಳೂರು ದಿನಾಂಕ: 14-10-2015.
7. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 10 ಸೇನೌವ 2016 ಬೆಂಗಳೂರು ದಿನಾಂಕ: 31-05-2016.

8 :- ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಿ5(1) ವರ್ಗ-21/2016-17 ದಿನಾಂಕ : 03/06/2016

9 :- ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ ಮತ್ತು ಧಾರವಾಡ ಇವರುಗಳ ಸಲ್ಲಿಸಿರುವ ಅರ್ಜಿಗಳು.

—*****—

ಪ್ರಸ್ತಾವನೆ:-

ಸರ್ಕಾರಿ ನೌಕರರ ವರ್ಗಾವಣೆಗಳ ಬಗ್ಗೆ ಉಲ್ಲೇಖ-1 ರ ಸರ್ಕಾರದ ಆದೇಶದಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ ಹಾಗೂ (2) ರಲ್ಲಿ ಸದರಿ ಮಾರ್ಗಸೂಚಿಗೆ ತಿದ್ದುಪಡಿಯನ್ನು ಹೊರಡಿಸಲಾಗಿದೆ. ಉಲ್ಲೇಖಿತ (1) ರಿಂದ (7) ರವರೆಗಿನ ಸರ್ಕಾರದ ಆದೇಶಗಳಲ್ಲಿನ ಸೂಚನೆಗಳು ಹಾಗೂ ಮಾರ್ಗಸೂಚಿಗಳನ್ವಯ 2016-17 ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಅಧಿಕಾರಿ ಹಾಗೂ ಸಿಬ್ಬಂದಿಗಳ ವರ್ಗಾವಣೆಗಳನ್ನು ಸಕ್ಷಮ ಪ್ರಾಧಿಕಾರಿಯವಾರು ಆಯಾಯ ಕಛೇರಿಗಳಲ್ಲಿ ವರ್ಗಾವಣೆಯನ್ನು ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ ಸೂಚನೆಗಳನ್ನು ನೀಡಲಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂತರ ಆಯುಕ್ತಾಲಯ ವರ್ಗಾವಣೆಯ ಮೂಲಕ ಬೆಂಗಳೂರು ಆಯುಕ್ತಾಲಯದ ಖಾಲಿ ಹುದ್ದೆಗಳಿಗೆ ವರ್ಗಾವಣೆ ಮಾಡಲು ದಿನಾಂಕ : 24/06/2016 ರಂದು ಕೌನ್ಸಿಲಿಂಗ್ ನಡೆಸಲಾಗಿದೆ. ಸದರಿ ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಬೋಧಕೇತರ ವರ್ಗದ ಸಿಬ್ಬಂದಿಗಳು ಖುದ್ದಾಗಿ ಹಾಜರಾಗಿ

ವರ್ಗಾವಣೆಗೆ ಸ್ಥಳವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಅದರಂತೆ ಅಂತರ ಆಯುಕ್ತಾಲಯದ ವರ್ಗಾವಣೆಯನ್ನು ಮಾಡಿ ಸ್ಥಳ ನಿಯುಕ್ತಿಗೊಳಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಆದೇಶ:-**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡ ಬೋಧಕೇತರ ವೃಂದದ ಸಿಬ್ಬಂಧಿಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಹುದ್ದೆ ಮತ್ತು ಸ್ಥಳಗಳಿಗೆ ಕೆಳಕಂಡ ಷರತ್ತಿಗೊಳಪಟ್ಟು ಅಂತರ ಆಯುಕ್ತಾಲಯ ವರ್ಗಾವಣೆಯನ್ನು ಮಾಡಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಅಧಿಕಾರಿಗಳ ಸಿಬ್ಬಂಧಿಯ ಹೆಸರು, ಹುದ್ದೆ ಮತ್ತು ವಿಳಾಸ ಶ್ರೀ / ಶ್ರೀಮತಿ | ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಆಯ್ಕೆ ಮಾಡಿ ಕೊಂಡಂತೆ ವರ್ಗಾವಣೆ ಮಾಡಿರುವ ಹುದ್ದೆ ಮತ್ತು ಸ್ಥಳ |
|---|---|---|
| | **ಪ್ರಥಮ ದರ್ಜೆ ಸಹಾಯಕರು** | |
| 1 | ಕವಿತಾ ಎಮ್ ಯಣಗೊರ, ಪ್ರ.ದ.ಸ., ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲ್ಬುರ್ಗಿ, | ಸರ್ಕಾರಿ ಪ್ರೌಢ ಶಾಲೆ, ಹೆಸರಘಟ್ಟ, ಉತ್ತರ ವಲಯ-2, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು |
| 2 | ಶಿವಲೀಲಾ, ಪ್ರ.ದ.ಸ., ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ರಾಯಚೂರು. | ಸರ್ಕಾರಿ ಪ್ರೌಢ ಶಾಲೆ, ಮಳಲಕೆರೆ, ದಾವಣಗೆರೆ ದಕ್ಷಿಣ ವಲಯ, ದಾವಣಗೆರೆ. |
| | **ದ್ವಿತೀಯ ದರ್ಜೆ ಸಹಾಯಕರು** | |
| 1 | ಆನಂದ್. ಕೆ.ಎಸ್., ದ್ವಿ.ದ.ಸ., ಸರ್ಕಾರಿ ಪದವಿ ಪೂರ್ವ ಕಾಲೇಜು, (ಪ್ರೌಢ ಶಾಲಾ ವಿಭಾಗ), ಕೊಂಕಲ್ ತಾಲ್ಲೂಕು, ಯಾದಗಿರಿ ಜಿಲ್ಲೆ | ಸರ್ಕಾರಿ ಪ್ರೌಢ ಶಾಲೆ, ನೆಟ್ಕಲ್, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ |
| 2 | ಕೆ.ಸಿ. ನಾಗರಾಜು, ದ್ವಿ.ದ.ಸ., ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಸಂಡೂರು, ಬಳ್ಳಾರಿ ಜಿಲ್ಲೆ | ಎಸ್.ಆರ್.ಎಂ.ಪಿ. ಸರ್ಕಾರಿ ಪ್ರೌಢ ಶಾಲೆ, ಮುತ್ತಿಗಿ, ಹರಪನಹಳ್ಳಿ, ತಾಲ್ಲೂಕು, ದಾವಣಗೆರೆ ಜಿಲ್ಲೆ |
| 3 | ನವಸುಮ ಕೆ.ಎಂ., ದ್ವಿ.ದ.ಸ., ಬಾಲಕರ ಸರ್ಕಾರಿ ಪ್ರೌಢ ಶಾಲೆ, ಜಾಲಹಳ್ಳಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ | ಸರ್ಕಾರಿ ಪದವಿ ಪೂರ್ವ ಕಾಲೇಜು, ಹಗರೆ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ. |
| 4 | ಸಣ್ಣತಿಮ್ಮಕ್ಕ .ಎಂ., ದ್ವಿ.ದ.ಸ, ಸರ್ಕಾರಿ ಪ್ರೌಢ ಶಾಲೆ, ಕಂಡಗಲ್ಲು, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ |

<u>ಷರತ್ತುಗಳು:-</u>

1. ಕೋರಿಕೆ ವರ್ಗಾವಣೆಯಾಗಿರುವುದರಿಂದ ವರ್ಗಾವಣೆಗೊಂಡ ಅಧಿಕಾರಿಗಳು/ ಸಿಬ್ಬಂದಿಗಳು ಯಾವುದೇ ರೀತಿಯ ವರ್ಗಾವಣೆ ಭತ್ಯೆ ಹಾಗೂ ಸೇರುವಿಕೆ ಕಾಲಕ್ಕೆ ಅರ್ಹರಿರುವುದಿಲ್ಲ.
2. ಅಧಿಕಾರಿಗಳ/ಸಿಬ್ಬಂದಿಗಳ ಕೋರಿಕೆ ಮೇರೆಗೆ ವರ್ಗಾವಣೆಗೆ ಅವಕಾಶ ನೀಡಿ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿ ಮಾಡಲಾಗಿದ್ದು, ಯಾವುದೇ ಸ್ಥಳ ಮಾರ್ಪಾಡಿಗೆ ಅವಕಾಶವಿರುವುದಿಲ್ಲ.

3. ವರ್ಗಾವಣೆ ಹೊಂದಿರುವ ಅಧಿಕಾರಿಗಳ / ಸಿಬ್ಬಂದಿಗಳು ಕರ್ತವ್ಯದಿಂದ ಬಿಡುಗಡೆ ಹೊಂದುವ ಪೂರ್ವದಲ್ಲಿ ಸಂಬಂಧಿಸಿದ **ಅಪರ ಆಯುಕ್ತರ ಅನುಮತಿ ಪಡೆದು** ಈ ಆದೇಶ ಹೊರಡಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ ಬಿಡುಗಡೆ ಹೊಂದಲು ತಿಳಿಸಿದೆ.
4. ವರ್ಗಾವಣೆ ಹೊಂದಿರುವ ಅಧಿಕಾರಿಗಳು/ಸಿಬ್ಬಂಧಿಗಳು ಕರ್ತವ್ಯದಿಂದ ಬಿಡುಗಡೆ ಹೊಂದಿದ ಹಾಗೂ ಕರ್ತವ್ಯಕ್ಕೆ ಹಾಜರಾದ ಬಗ್ಗೆ ಕೂಡಲೇ ಈ ಕಛೇರಿಗೆ ಮತ್ತು ಸಂಬಂಧಿಸಿದ ಎಲ್ಲಾ ಮೇಲಾಧಿಕಾರಿಗಳಿಗೆ ವರದಿ ಮಾಡುವುದು.
5. ವರ್ಗಾವಣೆ ಅರ್ಜಿಯಲ್ಲಿ ತಪ್ಪು ಮಾಹಿತಿ ನೀಡಿದ್ದಲ್ಲಿ ಅಂತಹ ಅಧಿಕಾರಿ/ಸಿಬ್ಬಂದಿಯನ್ನೇ ಪೂರ್ಣ ಜವಾಬ್ದಾರರನ್ನಾಗಿ ಪರಿಗಣಿಸಿ, ತಪ್ಪು ಮಾಹಿತಿ ನೀಡಿದ ಕಾರಣಕ್ಕಾಗಿ ಅವರ ಮೇಲೆ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.
6. ಸದರಿ ಅಧಿಕಾರಿಗಳು / ನೌಕರರು ವಾರ್ಗಾವಣೆಗೆ ನೀಡಿರುವ ಕಾರಣದಂತೆ ಕೌನ್ಸಿಲಿಂಗ್‌ನಲ್ಲಿ ಆದ್ಯತೆಯನ್ನು ನೀಡಲಾಗಿದ್ದು, ಸದರಿಯವರು ಸ್ಥಳ ಆಯ್ಕೆ ಪ್ರಕ್ರಿಯೆಯ ಮುಖೇನ ಸ್ಥಳ ಆಯ್ಕೆ ಮಾಡೊಕೊಂಡಿರುತ್ತಾರೆ. ಆದ್ಯತೆಯಲ್ಲಿ ವ್ಯತ್ಯಾಸವಿದ್ದಲ್ಲಿ ಅವರನ್ನು ಬಿಡುಗಡೆಗೊಳಿಸದೇ ಈ ಕಛೇರಿಗೆ ವರದಿ ಮಾಡಲು ತಿಳಿಸಿದೆ.
7. **ಈ ವರ್ಗಾವಣೆಯು ಅಂತರ ಆಯುಕ್ತಾಲಯದ ವರ್ಗಾವಣೆಯಾಗಿರುವುದರಿಂದ ಅವರುಗಳ ಜೇಷ್ಠತೆಯನ್ನು ಅವರುಗಳು ವರ್ಗಾವಣೆಯಾದ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಪರಿಗಣಿಸಲಾಗುವುದು.**

**[ಮಾನ್ಯ ಆಯುಕ್ತರಿಂದ ಕರಡು ಅನುಮೋದಿಸಿದೆ]**

27/6/16

[ಟಿ. ಜಯರಾಮು]
ಜಂಟಿ ನಿರ್ದೇಶಕರು(ಆಡಳಿತ) ಹೆ ಪ್ರ

ಇವರಿಗೆ :–

1. ಸಂಬಂಧಿಸಿದ ಶಾಲಾ / ಕಾಲೇಜು / ಕಛೇರಿ ಮುಖ್ಯಸ್ಥರಿಗೆ,
2. ಸಂಬಂಧಿಸಿದ ಸಿಬ್ಬಂದಿಗಳಿಗೆ

<u>ಪ್ರತಿಯನ್ನು:–</u>

3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ ಮತ್ತು ಧಾರವಾಡ
4. ಸಾರ್ವಜನಿಕ ಶಿಕ್ಷಣ ಇಲಾಖೆಯ, ಜಂಟಿ ನಿರ್ದೇಶಕರು, ಮೈಸೂರ ವಿಭಾಗ. ಮೈಸೂರು.
5. ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರಿಗೆ (ಆಡಳಿತ)
6. ಸಂಬಂಧಿಸಿದ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
7. ಕಛೇರಿ ಪ್ರತಿ